**ಸಿ.ಸಿ. ಸಂಖ್ಯೆ: 247 / 2021**
**ಪಿ.ಡಬ್ಲ್ಯೂ-01**

**ದಿನಾಂಕಃ 23-12-2021 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು** ಃ- **ಶ್ರೀ. ಆರ್.ಎನ್.ಆರ್.** ವಕೀಲರಿಂದ **ಆರೋಪಿ** ಪರವಾಗಿ ಃ-

ಆರೋಪಿಯವರು ನನ್ನ ಗಂಡನ ಆತ್ಮೀಯ ಸ್ನೇಹಿತರಾಗಿದ್ದು, ಸದರಿಯವರ ಮೂಲಕ ಪರಿಚಯವಾಗಿರುತ್ತಾರೆ, ಸದರಿ ಆರೋಪಿಯು 7-8 ವರ್ಷಗಳಿಂದ ಪರಿಚಯವಿದೆ. ಆರೋಪಿಯವರು ರಾಗಿ ವ್ಯವಹಾರ ಮಾಡುತ್ತಾರೆ. ಸದರಿಯವರು ಕಂಪನಿಯ ಹೆಸರು ಶ್ರೀ ಮಹಾಲಕ್ಷ್ಮೀ ರಾಗಿ ಕ್ಲಿನಿಂಗ್ ಮತ್ತು ಪ್ಲೋರಿಂಗ್ ಕಂಪನಿ. 20 ಲಕ್ಷವನ್ನು ನಾನು ಆರೋಪಿಗೆ ನೀಡಿರುತ್ತೇನೆ. ನಾನು ಬ್ಯೂಟಿಷನ್, ಟೈಲರಿಂಗ್ ಮತ್ತು ಸಣ್ಣದಾಗಿ ಬೇಸಾಯವನ್ನು ಮಾಡಿಸುತ್ತೇನೆ. ನಾನು 20 ಲಕ್ಷ ಹಣವನ್ನು 6 ಕಂತುಗಳಲ್ಲಿ ನೀಡಿರುತ್ತೇನೆ, ನಾನು ಮೊದಲಿಗೆ ದಿಃ 22-03-2019 ರಂದು 2 ಲಕ್ಷದ 85 ಸಾವಿರ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನಾನು 20 ಲಕ್ಷವನ್ನು ಕೂಡ ನಗದು ರೂಪದಲ್ಲಿಯೇ ನೀಡಿರುತ್ತೇನೆ.

2. ನಮಗೆ ವಾರ್ಷಿಕವಾಗಿ ಸುಮಾರು 2-3 ಲಕ್ಷ ಆದಾಯವಿದೆ. ನಾನು ಸಾಮಾನ್ಯವಾಗಿ ನಗದು ರೂಪದಲ್ಲಿ 2.50 ರಿಂದ 3 ಲಕ್ಷ ಹಣವನ್ನು ಇಟ್ಟಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನನಗೆ ಇಬ್ಬರು ಮಕ್ಕಳಿರುತ್ತಾರೆ. ಸದರಿಯವರಲ್ಲಿ ಒಬ್ಬ ಮಗುವನ್ನು ದತ್ತು ನೀಡಿದ್ದು, ನಮ್ಮ ಜೊತೆ ಒಂದು ಮಗು ಇರುತ್ತದೆ. ಸದರಿ ನಮ್ಮ ಮಗುವಿಗೆ ವಾರ್ಷಿಕವಾಗಿ 50-60 ಸಾವಿರ ಖರ್ಚು ಆಗುತ್ತದೆ. ನಾನು ಆರೋಪಿಗೆ ದಿಃ 12-04-2019 ರಲ್ಲಿ 8 ಲಕ್ಷ ನೀಡಿಲ್ಲ ಎಂದರೆ ಸರಿಯಲ್ಲ. 2019 ಏಪ್ರಿಲ್ ನಲ್ಲಿ ಕರೋನ ಲಾಕ್ ಡೌನ್ ಪ್ರಾರಂಭವಾಗಿರಲಿಲ್ಲ ಎಂದರೆ ಸರಿಯಲ್ಲ. 20 ಲಕ್ಷವನ್ನು ಬಡ್ಡಿಗಾಗಿ ನೀಡಿರಲಿಲ್ಲ. ಆರೋಪಿಯವರು ಸುಮಾರು 1 ವರ್ಷಗಳ ಅಂತರದಲ್ಲಿ ಚೆಕ್ಕನ್ನು ನೀಡಿರುತ್ತಾರೆ, ಸಾಕ್ಷಿ ಮುಂದುವರೆದು ನಾನು 2019 ರಲ್ಲಿ ಆರೋಪಿಗೆ ಹಣ ನೀಡಿದ್ದು, ಅವರು 2020 ರಲ್ಲಿ ಚೆಕ್ಕನ್ನು ನೀಡಿರುತ್ತಾರೆ ಎನ್ನುತ್ತಾರೆ.

3. ಆರೋಪಿಯವರು ಚೆಕ್ಕನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯವರನ್ನು ಹಣ ನೀಡಿದ ನಂತರ 5-6 ಬಾರಿ ಹಣ ಹಿಂದುರುಗಿಸುವಂತೆ ಕೇಳಿರುತ್ತೇನೆ. ನಾನು ಆರೋಪಿಯವರನ್ನು 20 ಲಕ್ಷದ ಹಣದಲ್ಲಿ ಭಾಗಾಶಃ ಹಣವನ್ನು ಪಾವತಿಸುವಂತೆ ಕೇಳಿದ್ದೆ. ಭಾಗಾಶಃ ಹಣವನ್ನು ಕೇಳಿದ್ದೆ ಎಂದು ನನ್ನ ದೂರಿನಲ್ಲಿಯಾಗಲೀ ಅಥವಾ ನೋಟಿಸ್ಸಿನಲ್ಲಿಯಾಗಲೀ ಅಥವಾ ಪ್ರಮಾಣಪತ್ರಿಕೆಯಲ್ಲಿಯಾಗಲೀ ಹೇಳಿಲ್ಲ ಎಂದರೆ ಸರಿ. ನಾನು ಮುಖಬೆಲೆಯ ನಗದನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ಹಣವನ್ನು ಬ್ಯಾಂಕಿನಿಂದ ಬಿಡುಗಡೆ ಮಾಡಿ ತಂದ ಬಗ್ಗೆ ಬ್ಯಾಂಕಿನ ಹಿಂಬರಹವಾಗಲೀ ಅಥವಾ ಓಚರ್ ಆಗಲೀ ಇರುವುದಿಲ್ಲ. ನಾನು ದಿನನಿತ್ಯದ ವ್ಯವಹಾರದ ಲೆಕ್ಕಚಾರದ ಪುಸ್ತಕದಲ್ಲಿ 20 ಲಕ್ಷದ ವಿಚಾರವನ್ನು ಬರೆದಿಲ್ಲ ಎಂದರೆ ಸರಿ.

4. ನಾನು ಆರೋಪಿಯವರಿಗೆ 20 ಲಕ್ಷವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯವರಿಗೆ ಹಣ ನೀಡುವಾಗ ನಾನು, ನನ್ನ ಗಂಡ ಮತ್ತು ಆರೋಪಿ ಮಾತ್ರ ಇದ್ದೇವು, ಸದರಿ ಹಣವನ್ನು ನಮ್ಮ ಮನೆಯಲ್ಲಿಯೇ ನೀಡಿರುತ್ತೇವೆ. ನಾನು ಆರೋಪಿಯವರಿಗೆ 20 ಲಕ್ಷ ಹಣ ನೀಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಆರೋಪಿಯವರಿಗೆ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯವರು ಬೆಳ್ಳೂರು ಶಾಖೆಯ ಎಸ್,ಬಿ,ಐ, ಬ್ಯಾಂಕಿನ ಚೆಕ್ಕುಗಳನ್ನು ನೀಡಿದ್ದರು. ನಿಪಿ-1, 3, 5 ಮತ್ತು 7 ರಲ್ಲಿನ ಚೆಕ್ಕುಗಳಲ್ಲಿ ಜೈಮಾರುತಿ ಟ್ರೆಡರ್ಸ್ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ 4 ಚೆಕ್ಕುಗಳನ್ನು ನನಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ 4 ಚೆಕ್ಕುಗಳನ್ನು ನನ್ನ ಗಂಡನೊಂದಿಗೆ ಮಾಡುತ್ತಿದ್ದ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿಯವರು ನನ್ನ ಗಂಡನಿಗೆ ಭದ್ರತೆಗಾಗಿ ನೀಡಿದ್ದರು ಎಂದರೆ ಸರಿಯಲ್ಲ. ನಿಪಿ-1, 3, 5 ಮತ್ತು 7 ರ ಚೆಕ್ ಸಂಖ್ಯೆಯ ಸರಣಿಯು ಮೇ-2020 ರ ಅವಧಿಯಲ್ಲಿ ಆರೋಪಿಯ ಬಳಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ನಾನು ನನ್ನ ದೂರಿನಲ್ಲಿ ತಿಳಿಸಿರುವಂತೆ ನಿಗದಿತ ಅವದಿಯಲ್ಲಿ ನಿಗದಿ ಮೊತ್ತವನ್ನು ನಮೂದಿಸಿರುವಂತೆ ಆರೋಪಿಯು ಪಡೆಯುವದೊರೊಂದಿಗೆ ಉಳಿಕೆ ಸಣ್ಣ ಮೊತ್ತವನ್ನು ಪಡೆದಿದ್ದಾರೆ ಎಂದು ನಮೂದಿಸಿರುವುದು ಸರಿಯಲ್ಲ. ಸದರಿ 4 ಚೆಕ್ಕುಗಳನ್ನು ನನ್ನ ಗಂಡನಿಗೆ ನೀಡಿದ್ದು, ನಾನು ಅಕ್ರಮ ಲಾಭ ಮಾಡಿಕೊಳ್ಳಲು ನನ್ನ ಹೆಸರಿನಲ್ಲಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**